# ಎಸ್. ಎಲ್. ಭೈರಪ್ಪ ಅವರ 'ನಿರಾಕರಣ' – ಒಂದು ವಿಶ್ಲೇಷಣೆ

**ವೇದಾವತಿ ಎಸ್.**[*]

**DOI: https://doi.org/10.5281/zenodo.21794302**

**ABSTRACT**

ಖ್ಯಾತ ಲೇಖಕ ಎಸ್. ಎಲ್. ಭೈರಪ್ಪ ಅವರ 'ನಿರಾಕರಣ' ಕಾದಂಬರಿಯ ಕೇಂದ್ರಬಿಂದುವಾದ ನರಹರಿಯ ಮಾನಸಿಕ ದ್ವಂದ್ವ, ಪಲಾಯನವಾದ ಮತ್ತು ಬದುಕಿನ ವಾಸ್ತವಗಳ ನಡುವಿನ ಸಂಘರ್ಷವನ್ನು ಇಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ. ವೇದಾಂತದ ಪ್ರಭಾವದಿಂದಾಗಿ ಸಂಸಾರಕ್ಕೆ ಅಂಟಿಯೂ ಅಂಟದಂತೆ ಇರಬಯಸುವ ನಾಯಕ, ತನ್ನ ಪತ್ನಿಯರ ಸಾವಿನ ನಂತರ ಐದು ಮಕ್ಕಳನ್ನು ದತ್ತು ನೀಡಿ ಸನ್ಯಾಸಿಯಾಗಲು ಹಿಮಾಲಯದತ್ತ ಸಾಗುತ್ತಾನೆ. ಆದರೆ, ಆಧ್ಯಾತ್ಮಿಕತೆಯ ಹೆಸರಿನಲ್ಲಿ ಕರ್ತವ್ಯದಿಂದ ನುಣುಚಿಕೊಳ್ಳುವ ಆತನಿಗೆ ಒಂಟಿತನದಲ್ಲಿಯೂ ನೆಮ್ಮದಿ ದೊರೆಯುವುದಿಲ್ಲ. ಅಂತಿಮವಾಗಿ ತನ್ನವರ ಸೆಳೆತಕ್ಕೆ ಸಿಲುಕಿ, ಅನಿವಾರ್ಯವಾಗಿ ತನ್ನದೇ ಮಕ್ಕಳ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಗೆ ಮರಳುವ ವಾಸ್ತವವನ್ನು ಈ ಬರಹವು ಕಟ್ಟಿಕೊಡುತ್ತದೆ. ದತ್ತು ಪ್ರಕ್ರಿಯೆಯ ಹಿಂದಿನ ಬಿಕ್ಕಟ್ಟುಗಳು ಹಾಗೂ ಮನುಷ್ಯನ ಸಹಜ ಭಾವನೆಗಳ ಅನಿವಾರ್ಯತೆಯನ್ನು ವಿಮರ್ಶಿಸುವ ಮೂಲಕ, ಕರ್ತವ್ಯವಿಮುಖ ಸನ್ಯಾಸತ್ವದ ವಿಫಲತೆಯನ್ನು ಎತ್ತಿತೋರಿಸಲಾಗಿದೆ.

**KEYWORDS:** ನಿರಾಕರಣ, ಎಸ್. ಎಲ್. ಭೈರಪ್ಪ, ಮಾನಸಿಕ ದ್ವಂದ್ವ, ಪಲಾಯನವಾದ, ದತ್ತು ಸ್ವೀಕಾರ.

* **ಡಾ. ವೇದಾವತಿ ಎಸ್.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಾಲೇಜು, ಕಾಸರಗೋಡು.

1971ರಲ್ಲಿ ಪ್ರಕಟವಾದ 'ನಿರಾಕರಣ' ಎಸ್. ಎಲ್. ಭೈರಪ್ಪ ಅವರ ಒಂದು ವಿಶಿಷ್ಟ ಕಾದಂಬರಿಯೆನ್ನಬಹುದು. ಇದರ ಶೀರ್ಷಿಕೆಯೇ ಕಾದಂಬರಿಯ ಆಶಯವನ್ನು ಪ್ರತಿಧ್ವನಿಸುತ್ತದೆ. 'ಜೀವನದ ಪ್ರತಿಬಿಂಬ ಸಾಹಿತ್ಯ' ಎನ್ನುವ ಹಾಗೆ ಪ್ರತಿ ಬರಹದ ಹಿಂದುಗಡೆ ಒಬ್ಬ ವ್ಯಕ್ತಿಯ ಜೀವನ ಇದ್ದೇ ಇರುತ್ತದೆ. ಈ ಕಾದಂಬರಿಯಂತೂ ಎಸ್. ಎಲ್. ಭೈರಪ್ಪ ಎಂಬ ಮಹಾನ್ ವ್ಯಕ್ತಿತ್ವದ ಒಂದೆಳೆಯೋ ಎಂದು ಭಾಸವಾಗುತ್ತದೆ.

ಈ ಕಾದಂಬರಿಯ ನಾಯಕ ನರಹರಿರಾವ್ ದ್ವಂದ್ವ ವ್ಯಕ್ತಿತ್ವದ ಮಾದರಿ. ಒಂದು ಕಡೆ ಜೀವನಕ್ಕೆ ಅಂಟಿಕೊಂಡ ಹಾಗೆ ಕಾಣಿಸುತ್ತಾನೆ. ಮತ್ತೊಂದೆಡೆ ಅಂಟಿಯೂ ಅಂಟದಂತೆ ಇದ್ದಾನೆ. ಇದರ ಕುರಿತ ವಿವರಣೆ ಕಾದಂಬರಿಯಲ್ಲಿಯೇ ಕಾಣಿಸಿಕೊಳ್ಳುತ್ತದೆ. 'ವೇದಾಂತದ ಪುಸ್ತಕಗಳು ಯಾವುದಕ್ಕೂ ಅಂಟಬಾರದು ಎಂಬ ನೀತಿಯನ್ನು ಕಲಿಸಿದ್ದವು. ಅವುಗಳ ಕಡೆಗೆ ಗಮನಹರಿಸಿದುದು ಅವನ ಚಿಕ್ಕ ವಯಸ್ಸಿನ ಅನುಭವ', ಹೊಳೆನರಸೀಪುರ ಹುಟ್ಟೂರು, ಚಿಕ್ಕ ವಯಸ್ಸಿನಲ್ಲೇ ತಂದೆ–ತಾಯಿ ತೀರಿಕೊಂಡರು. ಸಮಷ್ಟಿ ಕುಟುಂಬದಲ್ಲಿ ಮನೆಯ ಜೀತದ ಆಳಿನಂತೆ ಬೆಳೆಯಬೇಕಾಯಿತು. ಮುಂದೆ ಇವನ್ನೆಲ್ಲಾ ತ್ಯಜಿಸಿ ಬೊಂಬಾಯಿಯಲ್ಲಿ ನೆಲೆಯೂರಿದಾಗ ಮನಸ್ಸು ದೃಢವಾಗಿತ್ತು. 'ಅಂಟದೇ ಇರುವುದೇ ಸುಖದ ಹಾದಿ. ಮದುವೆ, ಹೆಂಡತಿ ಮೊದಲಾದ ಯಾವ ಬಂಧನವೂ ಬೇಡ, ಈ ಮನೆ ಸಾಕು, ಈ ಸಂಬಳ ಸಾಕು, ಉಳಿದ ವೇಳೆ ಏನಿದ್ದರೂ ವೇದಾಂತದ ಪುಸ್ತಕ ಓದುವುದು, ಭಾಷಣ, ಪ್ರವಚನಗಳನ್ನು ಕೇಳುವುದು, ಮತ್ತೆ ಏಕಾಂತದ ಸವಿಯನ್ನನುಭವಿಸುವುದು.' ಹೀಗೆ ತಾನು ಒಂಟಿಯಾಗಿರಬೇಕೆಂಬ ಹೆಬ್ಬಯಕೆಯನ್ನು ಬೆಳೆಸಿಕೊಂಡಿರುತ್ತಾನೆ ಕಾದಂಬರಿಯ ನಾಯಕ. ಆದರೆ ಮನುಷ್ಯನಲ್ಲಿ ಸಹಜ ಆಸೆ, ಆಕಾಂಕ್ಷೆಗಳು ನೆಲೆ ನಿಂತಿರುತ್ತವೆ ಎನ್ನುವ ಹಾಗೆ ನರಹರಿಯೂ ಸಂಸಾರದ ಜಂಜಾಟಕ್ಕೆ ಒಳಗಾಗುತ್ತಾನೆ. ಎಲ್ಲವನ್ನು ನಿರಾಕರಿಸುತ್ತಾ ನಿರಾಕರಿಸುತ್ತಾ ಮತ್ತೆ ಅದರೊಳಗೆ ಒಂದಾಗುವ ನರಹರಿ ಮತ್ತೆ ಅದರಿಂದ ಬಿಡುಗಡೆ ಪಡೆಯಲೆತ್ನಿಸುತ್ತಾನೆ.

ಸಾಮಾನ್ಯವಾಗಿ ಸ್ವಭಾವ ಸಾಮ್ಯತೆಯುಳ್ಳವರು ಬೇಗ ಹತ್ತಿರವಾಗಿ ಬಿಡುತ್ತಾರೆ. ನರಹರಿಯ ಜೀವನದಲ್ಲೂ ಅದು ಘಟಿಸುತ್ತದೆ. ವೇದಾಂತದಲ್ಲಿ ಆಸಕ್ತಿಯಿದ್ದ ನರಹರಿ ವೇದಾಂತದ ತತ್ವಗಳ ಒಲವಿದ್ದ ರಾಮಕೃಷ್ಣನ ಆಪ್ತ ಸ್ನೇಹಿತನಾಗುತ್ತಾನೆ. ಇದು ನರಹರಿಯ ಜೀವನದ ಮುಖ್ಯ ತಿರುವು. ಏಕಾಂಗಿಯಾಗಿ, ಸನ್ಯಾಸಿಯಾಗಿ, ಆಧ್ಯಾತ್ಮ ಜೀವನದ ಬಗ್ಗೆ ಆಸ್ಥೆ ಹೊಂದಿದ್ದ ನರಹರಿಯ ಜೀವನದಲ್ಲಿ ರಾಮಕೃಷ್ಣನ ತಂಗಿ ಲಲಿತಾಳ ಆಗಮನವಾಗುತ್ತದೆ. ತನ್ನ ಅಮ್ಮನ ಪ್ರತಿರೂಪದಂತೆ ಕಾಣಿಸಿಕೊಳ್ಳುವ ಲಲಿತಾ ಒಂದರ್ಥದಲ್ಲಿ ನರಹರಿಯ ಜೀವನದ ಸಾರ್ಥಕತೆಗೆ ಕಾರಣವಾಗುತ್ತಾಳೆ. ಕಾದಂಬರಿಯುದ್ದಕ್ಕೂ ಅವಳ ನೆನಪು ಹಚ್ಚಹಸಿರಾಗಿದ್ದುದ್ದನ್ನು ಕಾಣಲು ಸಾಧ್ಯವಾಗುತ್ತದೆ. ರಾಮಕೃಷ್ಣನಿಂದ ಪಡೆದುಕೊಂಡ ಇನ್ನೊಂದು ಬಳುವಳಿ ಹೊಗೆಸೊಪ್ಪು ಸೇವನೆ. ಅದೊಂದು ಚಟವಾಗಿ ನರಹರಿಯ ಜೀವನದಲ್ಲಿ ಕಾಡಿದ ವಿಷಯ. ಲಲಿತಾಳ ಜೊತೆಗಿನ ದಾಂಪತ್ಯ ಬದುಕಿನಲ್ಲಿ ಮೂರು ಮಕ್ಕಳನ್ನು ಪಡೆದ ನರಹರಿ ಅವಳ ಅನಿರೀಕ್ಷಿತ ಸಾವಿನಿಂದ ಪೂರ್ತಿಯಾಗಿ ಕುಸಿದುಬೀಳುತ್ತಾನೆ. ಅದರ

ಜೊತೆಯಲ್ಲೇ ರಾಮಕೃಷ್ಣನ ಸಾವು, ತದನಂತರದಲ್ಲಿ ರಾಮಕೃಷ್ಣನ ತಾಯಿಯ ಸಾವು – ಇದೆಲ್ಲವೂ ನರಹರಿಗೆ ನುಂಗಲಾರದ ತುತ್ತಾಗಿತ್ತು. ಲಲಿತಾಳ ತಂಗಿ ವೈದೇಹಿಯನ್ನು ಒಳ್ಳೆಯ ಕಡೆ ನೋಡಿ ಮದುವೆ ಮಾಡಬೇಕೆಂದಿದ್ದ ರಾಮಕೃಷ್ಣನ ಕನಸನ್ನು ನೆರವೇರಿಸುವ ಪಣ ತೊಟ್ಟಿದ್ದ ನರಹರಿಗೆ ಎಲ್ಲರನ್ನೂ ಕಳೆದುಕೊಂಡು ಒಬ್ಬಂಟಿಯಾಗಿದ್ದ ವೈದೇಹಿಯನ್ನು ವಿವಾಹವಾಗುವ ಅನಿವಾರ್ಯ ಪರಿಸ್ಥಿತಿ ಎದುರಾಗುತ್ತದೆ. ಮರುಮದುವೆಯೇ ಬೇಡವೆಂದಿದ್ದ ನರಹರಿ ಮತ್ತೆ ಸಂಸಾರ ಬಂಧನಕ್ಕೊಳಗಾಗುತ್ತಾನೆ. ರಾಮ–ಲಕ್ಷ್ಮಣರೆಂಬ ಅವಳಿ ಮಕ್ಕಳಿಗೆ ತಂದೆಯಾಗುತ್ತಾನೆ. ಇದರ ಹಿಂದೆಯೇ ವೈದೇಹಿಯನ್ನು ಕಳೆದುಕೊಳ್ಳುತ್ತಾನೆ.

ಮುಂಬೈಯಂತಹ ಮಹಾನಗರದಲ್ಲಿ ಟೈಪಿಸ್ಟ್ ಹುದ್ದೆಯನ್ನು ಮಾಡಿಕೊಂಡಿರುತ್ತಿದ್ದ ನರಹರಿಗೆ ಸಂಸಾರವನ್ನು ಸಾಗಿಸುವುದೇ ಅತ್ಯಂತ ದುಸ್ತರವಾಗಿತ್ತು. ಓವರ್ ಟೈಮ್ ಡ್ಯೂಟಿ ಮಾಡಿ ತನ್ನೈದು ಮಕ್ಕಳನ್ನು ಸಾಕಲು ಹರಸಾಹಸ ಪಡುತ್ತಿದ್ದನು. ಬೇಸತ್ತ ನರಹರಿ ಮಕ್ಕಳನ್ನು ದತ್ತು ಕೊಡಲು ತೀರ್ಮಾನ ಮಾಡುತ್ತಾನೆ. ಅನಾಥಾಶ್ರಮಕ್ಕಿಂತಲೂ ಯಾರಾದರೂ ಮಕ್ಕಳಿಲ್ಲದ ತಂದೆ–ತಾಯಂದಿರಾದರೆ ಮಕ್ಕಳಿಗೆ ಹೆತ್ತವರ ಪ್ರೀತಿ ಸಿಗಬಹುದಲ್ವೇ? ಎಂಬ ದೂರದಾಸೆ ಇತ್ತು. ಮುಂಬೈಯ ಟೈಮ್ಸ್ ಪತ್ರಿಕೆಯಲ್ಲಿ ಗೆಳೆಯ ಶೆಣೈನ ಸಹಾಯದಿಂದ ಜಾಹೀರಾತು ಪ್ರಕಟನೆಯಾಗುತ್ತದೆ. ಕಾದಂಬರಿಯು ಆರಂಭವಾಗುವುದೇ ಈ ಜಾಹೀರಾತಿನ ಮೂಲಕ.

‘ಮುಂಬೈ ಟೈಮ್ಸ್ ಪತ್ರಿಕೆಯ ಮೂರನೆಯ ಪುಟದ ಕಾಲುಭಾಗ ಬರೆದಿತ್ತು. ದಪ್ಪಕ್ಷರದ ಶೀರ್ಷಿಕೆ ಮತ್ತು ಐದು ಮಕ್ಕಳ ಸ್ಪಷ್ಟ ಫೋಟೋದೊಂದಿಗೆ: ದತ್ತು ಮಾಡಿಕೊಳ್ಳುವ ಐದು ಸುಂದರ ಪುಟ್ಟ ಮಕ್ಕಳಿವೆ. ಭಿಕ್ಷುಕರಲ್ಲ. ದಿಕ್ಕಿಲ್ಲದವೂ ಅಲ್ಲ. ಸುಸಂಸ್ಕೃತ ತಂದೆ–ತಾಯಿಗಳಿಗೆ ಹುಟ್ಟಿ ಸುಸಂಸ್ಕೃತ ರೀತಿಯಲ್ಲೇ ಬೆಳೆಸಿರುವ ಪುಟಾಣಿಗಳು. ತಾಯಿ ಸತ್ತಿರುವ ಈ ಕಂದಗಳಿಗೆ ಹೊಸ ತಾಯಿ ದೊರೆಯಲೆಂದು ತಂದೆಯು ದತ್ತು ಕೊಡಲು ನಿಶ್ಚಯಿಸಿದ್ದಾರೆ. ಏಕೆಂದರೆ ತಂದೆಯು ಎಷ್ಟೇ ಪ್ರೀತಿಯಿಂದ ಕಂಡರೂ ಅವುಗಳ ತಾಯಿಯಾಗಲಾರ. ಸುಂದರ ಮುಖದ, ಹಾಲುಗಲ್ಲದ ಈ ಚಿಣ್ಣಗಳಿಗೆ ತಾಯಂದಿರು ಬೇಕು. ಎಚ್ಚರಿಕೆ: ಭಿಕ್ಷುಕರಿಗೆ, ಮಕ್ಕಳ ವ್ಯಾಪಾರಿಗಳಿಗೆ, ಈ ಪ್ರೀತಿಯ ಎಳೆಯರನ್ನು ಕೊಡುವುದಿಲ್ಲ. ನಿಜವಾಗಿ ತಂದೆ–ತಾಯಿಯರಾಗುವಂತಹ ದಂಪತಿಗಳಿಗೆ ಮಾತ್ರ ಕೊಡಲಾಗುತ್ತದೆ…’ ಹೀಗೆ ಮುಂದುವರಿಯುತ್ತದೆ.

ಈ ಜಾಹೀರಾತನ್ನು ಓದಿ ಹಲವು ದಂಪತಿಗಳು ಇವರನ್ನು ಭೇಟಿಯಾಗುತ್ತಾರೆ. ಸೂಕ್ತರೆಂದೆನಿಸಿದ ದಂಪತಿಗಳಿಗೆ ಮಕ್ಕಳನ್ನು ದತ್ತುಕೊಡಲು ತೀರ್ಮಾನಿಸಿ ಎಲ್ಲಾ ಮಕ್ಕಳನ್ನು ಒಂದೇ ದಿನ ದತ್ತು ಕೊಡಲಾಗುತ್ತದೆ. ಹೀಗೆ ಈ ಬಂಧನದಿಂದಲೂ ಕಳಚಿಕೊಂಡು ಬಿಡುತ್ತಾನೆ, ಕಾದಂಬರಿಯ ನಾಯಕ ನರಹರಿ. ‘ಮಕ್ಕಳೆಲ್ಲ ಹೊರಟು ಹೋದ ಮೇಲೆ ಅಖಂಡ ಒಂಟಿತನದ ಅನುಭವ’, ‘ಮಳೆ ಬೆಳೆಯಿಲ್ಲದೆ ಜನರು ಊರುಬಿಟ್ಟ ಮೇಲೆ ನೆಲಸುವ ಶಬ್ದಹೀನತೆಯಂತೆ.’ ಮಕ್ಕಳು ಮರಿ ಅನ್ನೋದಾಗಲೀ,

ಮತ್ತೆ ಯಾವುದೇ ಆಗಲಿ, ಪ್ರೇಮ ಯಾವಾಗಲೂ ಆತ್ಮ ಸಂಸ್ಕಾರಕ್ಕೆ ಒಂದು ಸಾಧನ. ವಂಶ ಬೆಳೆಯುತ್ತೆ, ಆಸ್ತಿ ಉಳಿಯುತ್ತೆ, ಅನ್ನೊದೆಲ್ಲಾ ಮಿಥ್ಯಾ. 'ಕಸ್ತ್ವಂ ಕೋಹಂ, ಕುತ ಆಯಾತ: ಕಾ ಮೇ ಜನನೀ, ಕೋ ಮೇ ತಾತ?' (ನೀನು ಯಾರು? ನಾನು ಯಾರು? ಎಲ್ಲಿಂದ ಬಂದೆವು? ನನ್ನ ತಾಯಿ ಯಾರು? ನನ್ನ ತಂದೆ ಯಾರು?) ತಂದೆ ತಾಯಿ ಯಾರು? ಎಲ್ಲಿಂದ ಬಂದೆ? ಬಂದದ್ದು ಒಂಟಿ, ತಂದೆ ತಾಯಿ ಇವೆಲ್ಲ ಮೋಹ. ಅಂದರೆ ಒಂಟಿತನವೇ ಮೂಲ. ಅದನ್ನು ಬೆಳೆಸಿಕೊಂಡರೇ ತಾನೇ ಆಧ್ಯಾತ್ಮಿಕವಾಗಿ ಮೇಲೆ ಏರಿ ಆನಂದಾನುಭವವಾಗುವುದು? ಜೀವನದಲ್ಲಿ ಅಂಟಲೇಬಾರದೆಂದಿದ್ದ ನರಹರಿ ಅಂಟಿಯೂ ಆಯಿತು–ಈಗ ಅದು ಕಳೆದು ಪುನಃ ಒಂಟಿಯೂ ಆಯಿತು'. ವೇದಾಂತದ ಹಳೆ ಪುಸ್ತಕಗಳನ್ನು ಓದಲು ಪ್ರಾರಂಭಿಸಿದ. ವೇದಾಂತದ ಪುಸ್ತಕಗಳು ಯಾವುದಕ್ಕೂ ಅಂಟಬಾರದು ಎಂಬ ನೀತಿಯನ್ನು ಕಲಿಸಿದ್ದುವು. ಈ ಹಿನ್ನೆಲೆಯಲ್ಲಿ ಕಾದಂಬರಿಯಲ್ಲಿ ನರಹರಿಯನ್ನು ಪದೇ ಪದೇ ಕಾಡುವ ಒಂದು ಮಾತನ್ನು ಉಲ್ಲೇಖಿಸಬಹುದು: 'ಈ ವೇದಾಂತಿಕ ಮನೋಭಾವದ ಜನ ನೋಡಿ, ಕರ್ತವ್ಯ ತಪ್ಪಿಸಿಕೊಳ್ಳೋದ್ರಲ್ಲಿ ಯಾವಾಗಲೂ ಮುಂದು'. ಮಕ್ಕಳನ್ನು ದತ್ತು ಕೊಡುವುದರ ಬಗ್ಗೆ ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟಾಗಿನ ಸಂದರ್ಭದಲ್ಲಿ ಅವರಿವರು ಆಡಿಕೊಳ್ಳುವ ಮಾತು. ಈ ಮಾತು ಇಡೀ ಕಾದಂಬರಿಯ ಆಶಯವೇ ಆಗಿದೆ. ನರಹರಿಯು ಎಲ್ಲದರಿಂದ ಕಳಚಿಕೊಂಡ ಮೇಲೆ ಮುಂದೆ ಪೂರ್ಣ ಸ್ವತಂತ್ರನಾದನೇ ಎಂದು ಭಾವಿಸಿದರೆ ತಪ್ಪಾಗುತ್ತದೆ. ಎಳೆಎಳೆಯಾಗಿ ಸಮಸ್ಯೆಗಳು ತೊಡರಿಕೊಳ್ಳುವುದನ್ನು ಕಾಣಬಹುದು.

ಮಕ್ಕಳು, ಮನೆ, ಕೆಲಸ ಈ ಎಲ್ಲಾ ಬಂಧನದಿಂದ ಬಿಡುಗಡೆಯಾಗಿ ಸನ್ಯಾಸಿಯಾಗುವ ತನ್ನ ಮೂಲದ ಹೆಬ್ಬಯಕೆ ಏನಿದೆ ಅದರ ಕಡೆ ಮುಖ ಮಾಡಿ ಹೊರಟ. ಹಿಮಾಲಯದತ್ತ ಪ್ರಯಾಣ. ಆದರೆ ಅಲ್ಲೂ ಆತನಿಗೆ ಗುರಿ ಮುಟ್ಟಲಾಗುವುದಿಲ್ಲ. ಅಲ್ಲಿಯೂ ಸೋಲುತ್ತಾನೆ. ಎಲ್ಲಿಯೂ ದೃಢವಾಗಿ ನೆಲೆಯೂರಲು ಆತನಿಗೆ ಸಾಧ್ಯವಾಗುವುದೇ ಇಲ್ಲ. ಪೂರ್ವ ಬದುಕಿನ ಸ್ಮರಣೆ ಕಾಡುತ್ತದೆ. ಮಕ್ಕಳ ಮುಖ, ಲಲಿತಾ–ವೈದೇಹಿಯರ ವ್ಯಕ್ತಿತ್ವದ ತುಲನಾತ್ಮಕ ನೋಟ – ಇವೆಲ್ಲವೂ ಒಂದರ ಹಿಂದೆ ಒಂದರಂತೆ ಕಾಡಿ ಕೊನೆಗೆ ಅನಾಥಾಶ್ರಮದಲ್ಲಿ ಅನಾಥ ಮಕ್ಕಳಿಗೆ ಆಶ್ರಯದಾತನಾಗಿ ಬದುಕಲು ತೀರ್ಮಾನ ಮಾಡುತ್ತಾನೆ. ಇನ್ನೇನು ಶಾಶ್ವತವಾಗಿ ಅಲ್ಲೇ ನೆಲೆಯೂರುವುದೆಂದು ಖಚಿತ ಮಾಡಿಕೊಂಡಾಗಲೇ ತನ್ನದೇ ಮಗುವಿನ ಬರುವಿಕೆಯಿಂದ ಅದರಲ್ಲೂ ನಿರಾಸಕ್ತನಾಗುತ್ತಾನೆ. ಇದೆಲ್ಲಾ ಯಾಕಾಗುತ್ತದೆ ಅಥವಾ ತನ್ನವರ ಜೊತೆ ತನಗೆ ಯಾಕೆ ಬಾಳಲಾಗುತ್ತಿಲ್ಲ ಎಂಬ ಪ್ರಶ್ನೆ ಅವನನ್ನು ಕಾಡಿದರೂ ಅದಕ್ಕೆ ಎಲ್ಲೂ ಉತ್ತರವಿಲ್ಲ. ತಾನು, ತನ್ನವರು ಎನ್ನುವ ಆತ್ಮೀಯ ಸಂಬಂಧಕ್ಕೆ ಎಲ್ಲೂ ಒಳಗಾಗುವುದಿಲ್ಲ. ಒಳಗಾದರೆ ಎಲ್ಲಿ ತಾನು ಅದರೊಳಗೆ ಸೇರಿಬಿಡುತ್ತೇನೋ ಎಂಬ ಭಯ, ಆತಂಕ ಪ್ರತೀ ಹಂತ ಹಂತದಲ್ಲೂ ಕಾಡುವುದು. ನರಹರಿಯ ಈ ವರ್ತನೆಗೆ ಹೇಸಿ ಅನಾಥಾಶ್ರಮದಲ್ಲಿ ಆಪ್ತನಾಗಿದ್ದ ರೇಳೆ ಪ್ರತಿರೋಧಿಸುತ್ತಾನೆ. ನಿಜಸ್ಥಿತಿಯನ್ನು ಮನದಟ್ಟು ಮಾಡಲು ಪ್ರಯತ್ನಿಸುತ್ತಾನೆ. ಈ

ಹಿಂದೆ ಅನಾಥಾಶ್ರಮದ ಮಗು ಗಜಾನನಿಗೆ ಅಸೌಖ್ಯವಾದಾಗ ನರಹರಿ ಆ ಮಗುವನ್ನು ತಬ್ಬಿಕೊಂಡು ಅತ್ಯಂತ ಕಾಳಜಿಯಿಂದ ಆ ಮಗುವಿನ ಆರೈಕೆ ಮಾಡಿದ್ದನು. ಆದರೆ ಪ್ರಸ್ತುತ ತನ್ನದೇ ರಕ್ತ ಹಂಚಿಕೊಂಡು ಹುಟ್ಟಿದ್ದ ಗಣೇಶ ಟೈಫಾಯಿಡ್‌ನಿಂದ ನರಳುತ್ತಿದ್ದರೂ ಅವನ ಬಳಿ ಬರಲು, ಮಗುವಿನ ಮೈ ಸವರಲು ಹಿಂದೇಟು ಹಾಕುತ್ತಿದ್ದಾನೆ. ನರಹರಿಯ ಮನದಲ್ಲೇನಿದೆ? ಯಾಕೆ ಈ ರೀತಿ ವರ್ತಿಸುತ್ತಿದ್ದಾನೆ ಎಂಬ ಸಂಶಯಗಳು ಹುಟ್ಟಿಕೊಳ್ಳುತ್ತವೆ. ತಾನು ಪುನಃ ಸಂಸಾರ ಬಂಧನದೊಳಗಡೆ ಸಿಲುಕಬಾರದೆಂಬ ಮನೋಭಾವ ಅವನಲ್ಲಿ ಆವರಿಸಿಕೊಂಡು ಬಿಟ್ಟಿದೆ. ಸಕಾಲದಲ್ಲಿ ಮಗಳು ಭವಾನಿ ಎದುರಾಗುವುದಲ್ಲದೆ ತಂದೆಯ ಇಂತಹ ವರ್ತನೆಗೆ ಬೇಸತ್ತು ತಂದೆಗೆ ಸವಾಲೆಸೆಯುತ್ತಾಳೆ. ಧರ್ಮಸಂಕಟಕ್ಕೊಳಗಾದ ನರಹರಿ ಭವಾನಿಯ ಎದುರು ತಲೆಬಾಗಲೇಬೇಕಾಗುತ್ತದೆ. ಕರ್ತವ್ಯದೆಚ್ಚರಿನ ಸನ್ನೆಯಂತೆ ಮರಳಿ ಉದ್ಯೋಗಕ್ಕೆ ಸೇರಿ ತನ್ನ ಮಕ್ಕಳ ಭವಿಷ್ಯವನ್ನು ರೂಪಿಸುವ ಪಣ ತೊಡುವುದರೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

ಕಾಯಿ ಮಾಗಿ ಹಣ್ಣಾದಾಗ ಕಳಚಿ ಬೀಳುವಂತೆ ನರಹರಿಯ ಮನಸ್ಸು ಪಕ್ವವಾದಾಗ ಒಂದು ಖಚಿತ ನಿರ್ಧಾರಕ್ಕೆ ಬರಲು ಸಾಧ್ಯವಾಯಿತಷ್ಟೆ. ಅಲ್ಲಿ ಸರಿ–ತಪ್ಪುಗಳ ವಿಶ್ಲೇಷಣೆ ಇಲ್ಲ. ಇದುವೇ ಸರಿ ಎಂಬ ನೋಟ ಕಣ್ಣಲ್ಲೂ, ಮನದಲ್ಲೂ ಇತ್ತು. ಅನಾಥಾಶ್ರಮದಲ್ಲಿದ್ದುಕೊಂಡೇ ಅಲ್ಲಿನ ಮಕ್ಕಳ ಸೇವೆ ಮಾಡಿಕೊಂಡೇ ತನ್ನ ಮಕ್ಕಳನ್ನು ಪೋಷಿಸುವ ತೀರ್ಮಾನ ತೆಗೆದುಕೊಳ್ಳುವುದಲ್ಲದೆ, ಅಲ್ಲಿ ಉದ್ಯೋಗವಿಲ್ಲವಾದರೆ ಹೊರಗಡೆ ಎಲ್ಲಿಯಾದರೂ ಮಕ್ಕಳ ಜೊತೆಗಿದ್ದು ಬದುಕುವ ತೀರ್ಮಾನ ಕಾದಂಬರಿಗೊಂದು ಔಚಿತ್ಯಪೂರ್ಣ ಮುಕ್ತಾಯವನ್ನು ನೀಡಿದೆಯೆಂದು ಹೇಳಬಹುದು. ಈ ಕಾದಂಬರಿಯು ದತ್ತು ಸ್ವೀಕಾರ ಮತ್ತು ಸರಿಯಾಗಿ ನಿರ್ವಹಿಸದಿದ್ದರೆ ಉಂಟಾಗುವ ಅಪಾಯಗಳ ಬಗ್ಗೆ ನಮ್ಮ ಕಣ್ಣು ತೆರೆಸುತ್ತದೆ. ಸಾಂದರ್ಭಿಕ ಅನಿವಾರ್ಯತೆ ನರಹರಿಯನ್ನು ಸನ್ಯಾಸಿಯಾಗಲು ಪ್ರೇರೇಪಿಸುತ್ತದೆ ಮತ್ತು ಒಂದು ಬದ್ಧತೆಯಿಲ್ಲದ ಸನ್ಯಾಸತ್ವ ಕಾಣಲು ಸಾಧ್ಯವಾಗುತ್ತದೆ. ಕಾದಂಬರಿಕಾರರು ಅದನ್ನು ಸ್ಪಷ್ಟವಾಗಿ ಕಾದಂಬರಿಯಲ್ಲಿ ಸೂಚಿಸುತ್ತಾರೆ: ‘ಜೀವನವೆಂದರೆ ಪ್ರವಾಹ. ಯಾರನ್ನೂ ಎಲ್ಲಿ ಕೊಚ್ಚಿ ಎಸೆಯುತ್ತದೆಯೋ! ಅದರ ವಿರುದ್ಧ ಈಜಿ ತಡೆದು ಗಟ್ಟಿಯಾಗಿ ನಿಲ್ಲುವವನೇ ಧೀರ’. ಕಾದಂಬರಿಯ ನಾಯಕ ಪ್ರವಾಹದ ವಿರುದ್ಧ ಈಜಲು ಪ್ರಯತ್ನಿಸುತ್ತಾನೆ. ಕೊನೆಯಲ್ಲಿ ದಡ ಮುಟ್ಟಿದ ಎಂಬ ಆಶ್ವಾಸನೆಯನ್ನು ಕಾದಂಬರಿಕಾರರು ನೀಡಿದರೂ ನಮ್ಮಲ್ಲಿ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಇವನು ಹೀಗೆ ಎಷ್ಟು ಸಮಯದ ವರೆಗೆ ಜೀವನ ಸಾಗಿಸಬಹುದು? ನಿರಾಸೆ ಮೂಡಿದ ತಕ್ಷಣ ಎಲ್ಲವನ್ನೂ ಬಿಟ್ಟು ಹೋಗಬಹುದಲ್ವೇ? ಯಾಕೆಂದರೆ ಈ ನಾಯಕನ ಸ್ವಭಾವವೇ ಹಾಗೆ, ಜೀವನದಲ್ಲಿ ಅಂಟಿಯೂ ಅಂಟದಂತೆ ಇರಬೇಕು ಎಂಬ ತತ್ವಕ್ಕೆ ಬದ್ಧನಾದ ವ್ಯಕ್ತಿಯಲ್ಲವೇ ಹಾಗೆ. ಒಟ್ಟಿನಲ್ಲಿ ನನಗನಿಸುವುದು ಕಾದಂಬರಿಯ ನಾಯಕ ನಿಜಕ್ಕೂ ಸಾಧಿಸಿದ್ದೇನು? ಕಾದಂಬರಿಯುದ್ದಕ್ಕೂ ನರಹರಿಯ ಜೀವನದ ಬಗ್ಗೆ ಓದುಗರಲ್ಲಿ ಕುತೂಹಲ ಮೂಡಿಸುತ್ತಾ ಸಾಗುವ ಎಸ್. ಎಲ್. ಭೈರಪ್ಪ ಅವರ ಬರಹದ ಧಾಟಿ

ವಿಶೇಷವಾದುದು. ಲೇಖಕರ ತತ್ವಶಾಸ್ತ್ರದಲ್ಲಿನ ಆಳವಾದ ಪಾಂಡಿತ್ಯ, ಆಧ್ಯಾತ್ಮದ ಕುರಿತ ಒಲವು ಕಾದಂಬರಿಯಲ್ಲಿ ಮುಖ್ಯವಾಗಿ ಎದ್ದು ಕಾಣುತ್ತದೆ.

**ಆಕರ ಗ್ರಂಥ:**

1. ಭೈರಪ್ಪ ಎಸ್.ಎಲ್., (1971), ನಿರಾಕರಣ, ಬೆಂಗಳೂರು: ಸಾಹಿತ್ಯ ಭಂಡಾರ.